ದಿನಾಂಕಃ 06/01/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪರ ಶ್ರೀ. ಎಂ ಎನ್ ಎಸ್., ವಕೀಲರಿಂದಃ**

ನಾನು ಆಫೀಸರ್ ಆಗಿ 9 ವರ್ಷಗಳಾಗಿರುತ್ತವೆ. ನಮ್ಮ ಸಂಸ್ಥೆಯಲ್ಲಿ ಆಡಳಿತಾಧಿಕಾರಿಗಳು ಬೇರೆಯವರು ಇರುತ್ತಾರೆ ಎಂದರೆ ಸರಿ. ನ್ಯಾಯಾಲಯದಲ್ಲಿ ಪ್ರಕರಣವನ್ನು ನಡೆಸಲು ಅಧಿಕಾರವನ್ನು ನನಗೇ ಕೊಟ್ಟಿರುತ್ತಾರೆ. ಆ ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಹೌದು.

ಆರೋಪಿಯು ನಮ್ಮ ಸಂಸ್ಥೆಯಲ್ಲಿ ಮೊದಲನೇ ಬಾರಿ ಸಾಲವನ್ನು ಪಡೆದುಕೊಂಡಿರುತ್ತಾರೆ. ಸಾಲಕ್ಕೆ ಅರ್ಜಿಯನ್ನು ಕೊಟ್ಟಾಗ ಅದು ಆಡಳಿತಾಧಿಕಾರಿಗಳ ಮುಂದೆ ಮಂಡನೆಯಾಗಬೇಕು ಎಂದರೆ ಸರಿ. ಆ ಸಮಯದಲ್ಲಿ ಆಡಳಿತಾಧಿಕಾರಿಗಳು ಅರ್ಜಿದಾರರ ಪೂರ್ವಾಪರತೆಯನ್ನು ಪರಿಶೀಲನೆ ಮಾಡುತ್ತಾರೆಯೇ ಎಂದರೆ ಹೌದು. ಆ ಪರಿಶೀಲನೆ ಮಾಡುವಾಗ ಅಡಮಾನಕ್ಕೆ ಏನನ್ನಾದರೂ ಪಡೆದುಕೊಳ್ಳುತ್ತೀರಾ ಎಂದರೆ ಇಲ್ಲ. ಆರೋಪಿಗೆ ಸಾಲವನ್ನು ನೀಡುವಾಗ ಅವರಿಗೆ ಸಾಲವನ್ನು ವಾಪಾಸು ಮಾಡುವ ಸಾಮರ್ಥ್ಯ ಇರುತ್ತದೆಯೋ, ಇಲ್ಲವೋ ತಿಳಿದುಕೊಳ್ಳಲು ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ನನಗೆ ಮಾಹಿತಿ ಇಲ್ಲ.

ಆರೋಪಿಯ ಬಾವ ರವೀಶ ಎಂಬುವವರು ಗೊತ್ತೆ ಎಂದರೆ ರವೀಶ್ ಅವರು ಹಿಂದೆ ಸಾಲವನ್ನು ನಮ್ಮ ಸಂಸ್ಥೆಯಲ್ಲಿ ಮಾಡಿರುತ್ತಾರೆ, ಅವರು ಆರೋಪಿಯ ಬಾವ ಎಂಬುದು ನನಗೆ ಗೊತ್ತಿಲ್ಲ. ರವೀಶ್ ಅವರು ಸಾಲವನ್ನು ಮರುಪಾವತಿ ಮಾಡಿ ಕ್ಲೋಸ್ ಮಾಡಿಕೊಂಡಿರುತ್ತಾರೆ.

ನಿಮ್ಮ ಸಂಸ್ಥೆಯಲ್ಲಿ ಯಾರಾದರೂ ಒಬ್ಬರು ಸಾಲವನ್ನು ಪಡೆದುಕೊಳ್ಳುವಾಗ

ಅವರಿಂದ ಒಬ್ಬ ಜಾಮೀನುದಾರರನ್ನು ಹಾಜರುಪಡಿಸಲು ನೀವು ಕೇಳುತ್ತೀರಿ ಎಂದರೆ ಸರಿ. ಆರೋಪಿಗೆ ಯಾರು ಜಾಮೀನುದಾರರು ಎಂದು ನನಗೆ ನೆನಪಿಲ್ಲ.

ರವೀಶ್ ಅವರು ಯಾವ ಜಾಮೀನುದಾರರನ್ನು ಹಾಜರುಪಡಿಸಿದ್ದರು ಎಂದರೆ ಅವರು ಆಭರಣಗಳ ಮೇಲೆ ಸಾಲವನ್ನು ಪಡೆದುಕೊಂಡಿದ್ದರು. ಅವರು ಆ ಆಭರಣಗಳನ್ನು ವಾಪಾಸು ಬಿಡಿಸಿಕೊಂಡು ಹೋಗಿರುವ ಬಗ್ಗೆ ನನಗೆ ಮಾಹಿತಿ ಇದೆ. ಅವರು ಎಷ್ಟು ಅವಧಿಯವರೆಗೆ ಆಭರಣಗಳನ್ನು ನಿಮ್ಮ ಸಂಸ್ಥೆಯಲ್ಲಿ ಇಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅವರು ಆ ಸಮಯದಲ್ಲಿ ಹಣವನ್ನು ರೆಗ್ಯುಲರ್ ಆಗಿ ಪಾವತಿ ಮಾಡುತ್ತಿದ್ದರೇ ಅವರು ಇರೆಗ್ಯುಲರ್ ಆಗಿ ಹಣವನ್ನು ಮರುಪಾವತಿ ಮಾಡುತ್ತಿದ್ದರು. ಆರೋಪಿಯು ಸಾಲದ ಅರ್ಜಿಯನ್ನು ಯಾವಾಗ ಕೊಟ್ಟಿದ್ದರು ಎಂದು ನನಗೆ ನೆನಪಿಲ್ಲ. ಅವರು ಅರ್ಜಿಯನ್ನು ಕೊಟ್ಟ ಎಷ್ಟು ದಿನಗಳ ನಂತರ ಆಡಳಿತಾಧಿಕಾರಿಗಳು ಅದರ ಮಂಡನೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಂಡನೆ ಮಾಡಿದ ಎಷ್ಟು ದಿನಗಳ ನಂತರ ಅದನ್ನು ಪಾಸ್ ಮಾಡಿರುತ್ತಾರೆ ಎಂದರೆ ಮೀಟಿಂಗ್ ಮಾಡಿದ ದಿನವೇ ಪಾಸ್ ಆಗುತ್ತದೆ. ಆ ಸಾಲವನ್ನು ಕೊಡುವ ನಡಾವಳಿ ಪಾಸಾದ ಮೇಲೆ ಸದರಿ ಅರ್ಜಿದಾರರಿಗೆ ಆ ಸಾಲವನ್ನು ಮರುಪಾವತಿಸುವ ಸಾಮರ್ಥ್ಯ ಇರುತ್ತದೆಯೋ ಅಥವಾ ಇರುವುದಿಲ್ಲವೋ ಎಂದು ನಿಮ್ಮ ಸಂಸ್ಥೆಯಿಂದ ಯಾರಾದರೂ ಅವರ ಊರಿಗೆ ಹೋಗಿ ಪರಿಶೀಲನೆ ಮಾಡಿರುತ್ತಾರೆಯೆ ಎಂದರೆ ಇಲ್ಲ.

ಆರೋಪಿಗೆ ಕೃಷಿ ಭೂಮಿಯಾಗಲೀ , ಆದಾಯ ಬರುವಂತಹ ಉದ್ಯೋಗವಾಗಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಬಿಪಿಎಲ್ ಕಾರ್ಡುದಾರರು ಎಂದರೆ ನನಗೆ ಗೊತ್ತಿಲ್ಲ. ಲೋನ್ ಬೇಕೆಂದು ಆರೋಪಿಯು ನಿಮ್ಮ ಸಂಸ್ಥೆಗೆ ಬಂದಾಗ ಅವರಿಂದ ಯಾವ ಯಾವ ದಾಖಲಾತಿಗಳನ್ನು ಪಡೆದಕೊಂಡಿರುತ್ತೀರಿ ಎಂದರೆ ಪ್ರಾಮಿಸರಿ ನೋಟ್ ಮತ್ತು ಹಣ ಸಂದಾಯ ರಸೀದಿ, ಬಾಂಡ್ ಪೇಪರ್ ಗಳನ್ನು ಪಡೆದುಕೊಂಡಿರುತ್ತೇವೆ.

ಈ ಕೇಸಿಗೆ ಸಂಬಂಧಿಸಿದಂತೆ ಈ ಮೇಲ್ಕಂಡ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಚೆಕ್ಕನು ಬರೆಸಿಕೊಳ್ಳುವ ಮೊದಲು ಅವರನ್ನು ನೀವು ಭೇಟಿಯಾಗಿರುತ್ತೀರಾ ಎಂದರೆ ಅವರ ಮನೆಗೆ ಹೋಗಿ ಭೇಟಿಯಾಗಿರುತ್ತೇವೆ, ನಾನು ಹೋಗಿಲ್ಲ ,ಫೋನ್ ಮುಖಾಂತರ ತಿಳಿಸಿರುತ್ತೇವೆ. ಅವರ ಮನೆಗೆ ಜಯಪುರ ಬ್ರಾಂಚ್ ನವರು ಹೋಗಿರುತ್ತಾರೆ. ಏಕೆಂದರೆ ಆರೋಪಿಯ ಮನೆ ತೆಂಗಿನಮನೆಯಾಗಿರುತ್ತದೆ. ಆರೋಪಿಗೆ ಹಣ ಜಯಪುರ ಶಾಖೆಯಲ್ಲಿ ಮಂಜೂರಾಗಿರುತ್ತದೆಯೆ ಎಂದರೆ ಅವರು ಅರ್ಜಿಯನ್ನು ಜಯಪುರ ಶಾಖೆಯಲ್ಲಿ ಕೊಟ್ಟಿರುತ್ತಾರೆ. ಆದರೆ ಯಾವುದೇ ಹಣ ಮಂಜೂರಾತಿಯು ನಮ್ಮ ಹೆಡ್ ಆಫೀಸ್ ನಲ್ಲೇ ಆಗುತ್ತದೆ. ಜಯಪುರ ಶಾಖೆಯಲ್ಲಿ ಸಿಎಓ., ಯಾರು ಎಂದರೆ ಸಿಎಓ., ಇಲ್ಲ ಬ್ರಾಂಚ್ ಇನ್ ಚಾರ್ಜರ್ ಎಂದು ಮಹೇಶ್ ಅವರು ಇರುತ್ತಾರೆ. ಈ ಲೋನಿನ ಅಸಲು ರೂ.50,000/- ಇರುತ್ತದೆ. ಲೋನನ್ನು ಕೊಡುವ ಸಮಯದಲ್ಲಿ ಅವರಿಗೆ ಅಂದಾಜು ಶೇಕಡಾ 15 ರಂತೆ ಬಡ್ಡಿ ಎಂದು ಹೇಳಿರಬಹುದು. ಅವರು ಹಣವನ್ನು ಪಡೆದುಕೊಂಡು ಹೋದ ಮೇಲೆ ಎಷ್ಟು ಕಂತನ್ನು ನಿಮ್ಮ ಸಂಸ್ಥೆಗೆ ಕಟ್ಟಿರುತ್ತಾರೆ ಎಂದರೆ ಆ ಬಗ್ಗೆ ಮಾಹಿತಿ ಇಲ್ಲ. ಎಷ್ಟು ಲೋನ್ ಡ್ಯೂ ಆದ ಮೇಲೆ ನೋಟಿಸನ್ನು ಕೊಟ್ಟಿರುತ್ತೀರಿ ಎಂದು ನಿಮಗೆ ಗೊತ್ತೇ ಎಂದರೆ ಎಷ್ಟು ಎಂದು ಮಾಹಿತಿ ಇಲ್ಲ. ಅವರು ಎಷ್ಟು ಕಂತುಗಳಲ್ಲಿ, ಯಾವ ಆಧಾರದ ಮೇಲೆ ಹಣವನ್ನು ಕಟ್ಟಿರುತ್ತಾರೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಅವರಿಗೆ ಹಣವನ್ನು ಪ್ರತೀ ತಿಂಗಳೂ ಅಥವಾ ವಾರ್ಷಿಕ ಕಂತುಗಳಲ್ಲಿ ಕೊಡುತ್ತೇವೆ. ಹಾಗಾಗಿ ಇವರಿಗೆ ಯಾವ ರೀತಿಯ ಕಂತುಗಳಲ್ಲಿ ಹಣ ಕಟ್ಟಬೇಕೆಂದು ಹೇಳಲಾಗಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ರೂ.80,000/- ಹಣ ಆಗುತ್ತದೆ ಎಂದು ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಜಯಪುರ ಶಾಖೆಯ ಬ್ಯಾಂಕಿನವರು ಹೇಳಿರುತ್ತಾರೆ.

ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ಮೆಮೋ ಆಫ್ ಕ್ಯಾಲ್ಕುಲೇಶನ್

ಅನ್ನು ಮಾಡಿಲ್ಲ ಎಂದರೆ ಜಯಪುರ ಶಾಖೆಯಲ್ಲಿ ಮೆಮೋ ಆಫ್ ಕ್ಯಾಲ್ಕುಲೇಶನ್ ಮಾಡಲಾಗಿರುತ್ತದೆ.

ನಿಪಿ.1 ರಲ್ಲಿ ಇರುವ ಬರವಣಿಗೆಯನ್ನು ಯಾರು ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅದನ್ನು ನಿಮ್ಮ ಸಂಸ್ಥೆಯವರು ಮಾಡಿರುತ್ತಾರೋ ಅಥವಾ ಬೇರೆಯವರು ಮಾಡಿರುತ್ತಾರೋ ಎಂಬ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಚೆಕ್ಕನ್ನು ನಮ್ಮ ಸಂಸ್ಥೆಯಿಂದ ಕಾವೇರಿ ಗ್ರಾಮೀಣ ಬ್ಯಾಂಕ್ ಗೆ ಹಾಜರುಪಡಿಸಲಾಗಿರುತ್ತದೆ. ಅದನ್ನು ಹಾಜರುಪಡಿಸುವ ಸಮಯದಲ್ಲಿ ಸಂಸ್ಥೆಯ ಸಿಎಓ., ರವರು ಸಹಿ ಹಾಕಿ ಹಾಜರುಪಡಿಸಬೇಕಾಗುತ್ತದೆ ಎಂದರೆ ಅಗತ್ಯತೆ ಇಲ್ಲ. ನಿಪಿ.1 ನಲ್ಲಿರುವ ಸಹಿಯ ಇಂಕಿಗೂ ಹಾಗೂ ಬರವಣಿಗೆಯ ಇಂಕಿಗೂ ಸಾಕಷ್ಟು ವ್ಯತ್ಯಾಸ ಇರುತ್ತದೆ ಎಂದರೆ ನನ್ನ ಗಮನಕ್ಕೆ ಬರುತ್ತಿಲ್ಲ, ನನಗೆ ಅಷ್ಟೊಂದು ಗೊತ್ತಾಗುತ್ತಿಲ್ಲ. ನಿಪಿ.1 ರಲ್ಲಿರುವ ಸಹಿ ದಪ್ಪ ಅಕ್ಷರದಲ್ಲಿರುತ್ತದೆ ಮತ್ತು ಬರವಣಿಗೆ ತೆಳ್ಳಗಿನ ಅಕ್ಷರದಲ್ಲಿ ಇರುತ್ತದೆ ಎಂದರೆ ಬರೆಯುವ ಶೈಲಿಯಲ್ಲಿ ವ್ಯತ್ಯಾಸ ಇರಬಹುದು. ಆರೋಪಿಗೆ ಇಂಗ್ಲೀಷ್ ಭಾಷೆ ಓದಲು, ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನೀವು ವಕೀಲರ ಮೂಲಕ ಕಳುಹಿಸಿದ ನೋಟಿಸ್ ಆರೋಪಿಗೆ ಜಾರಿಯಾಗಿರುತ್ತದೆಯೋ ಇಲ್ಲವೋ ಎಂದರೆ ಜಾರಿಯಾಗಿರುತ್ತದೆ. ಆರೋಪಿಗೆ ನೋಟಿಸ್ ಜಾರಿಯಾಗಿಲ್ಲ ಮತ್ತು ಅಂಚೆ ಸ್ವೀಕೃತಿ ಪತ್ರದ ಮೇಲಿನ ಸಹಿ ಅವರದ್ದಲ್ಲ ಎಂದರೆ ನನಗೆ ಮಾಹಿತಿ ಇಲ್ಲ, ಅಂಚೆ ಕಛೇರಿಯವರನ್ನೇ ಕೇಳಬೇಕು. ಇದು ಆರೋಪಿಯದ್ದಲ್ಲ ಎಂದು ಪರೀಕ್ಷಿಸಲು ವಿಧಿ ವಿಜ್ಞಾನ ಇಲಾಖೆಗೆ ಕಳುಹಿಸಲು ನಿಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಅವರಿಗೆ ನೋಟಿಸ್ ತಲುಪಿದ್ದರೆ ಅವರು ಮರುತ್ತರವನ್ನು ಕೊಡುತ್ತಿದ್ದರು, ಅವರಿಗೆ ನೋಟಿಸು ತಲುಪದೇ ಇರುವ ಕಾರಣ ಅವರು ಮರುತ್ತರವನ್ನು ಕೊಟ್ಟಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ನಿಪಿ.1 ರ ಚೆಕ್ಕನ್ನು ನಿಮ್ಮ ಸಂಸ್ಥೆಗೆ ಆರೋಪಿಯು ಯಾವಾಗ ನೀಡಿರುತ್ತಾರೆ ಎಂಬ ಬಗ್ಗೆ ನಿಮಗೆ ಮಾಹಿತಿ ಇದೆಯೆ ಎಂದರೆ ಅವರು ಸಾಲದ ಕಂತು ಬಾಕಿ ಇದ್ದಾಗ ಆ ಚೆಕ್ಕನ್ನು ಕೊಟ್ಟಿರುತ್ತಾರೆ.

ರವೀಶ್ ಅವರು ಮಾಡಿದ ಸಾಲಕ್ಕೆ ಆರೋಪಿಯು ಜಾಮೀನುದಾರರಾಗಿದ್ದು ರವೀಶ್ ಅವರು ಎಲ್ಲಾ ಸಾಲವನ್ನು ಮರುಪಾವತಿ ಮಾಡಿದ್ದರೂ ಅವರು ರವೀಶ್ ಅವರ ಸಾಲದ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಕೇಸನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಸಂಸ್ಥೆಯಲ್ಲಿ ಆರೋಪಿ ಯಾವತ್ತೂ ಸಹ ಸಾಲವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಇದುವರೆಗೂ ನೀವು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ರವೀಶ್ ಅವರು ಸಾಲ ಮಾಡಿದ್ದಕ್ಕೆ ಆರೋಪಿಯ ಕಡೆಯಿಂದ 2 ಖಾಲಿ ಚೆಕ್ಕನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಹಾಗಾಗಿ ಆರೋಪಿಯು ಚೆಕ್ಕಿಗೆ ಸಹಿಯನ್ನು ಮಾತ್ರ ಹಾಕಿಕೊಟ್ಟಿರುತ್ತಾರೆ, ಅದರಲ್ಲಿರುವ ಬರವಣಿಗೆಯನ್ನು ನಿಮ್ಮ ಸಂಸ್ಥೆಯವರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಾಲವನ್ನು ಪಡೆದುಕೊಳ್ಳುವ ಮತ್ತು ಹಿಂತಿರುಗಿಸುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು , ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ದಿನಾಂಕ:06/01/2022 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಇ. ಓ.

ಸಹಿ/-xxx
(ಪ್ರಿಯಾ ರವಿ ಜೋಗಳೆಕರ್)
ಸಿವಿಲ್ ನ್ಯಾಯಾಧೀಶರು ಮತ್ತು
ಸಾಕ್ಷಿಯ ಸಹಿ: ಪ್ರ.ದ.ನ್ಯಾ.ದಂ: ಕೊಪ್ಪ.